ಲೋಕಾಯುಕ್ತಕ್ಕೆ ಹೆಚ್ಚು ಅಧಿಕಾರ ನೀಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2(305)

ಸದಸ್ಯರ ಹೆಸರು: ಶ್ರೀ ಮಲ್ಲಿಕಾರ್ಜುನ.ಕೆ.ಬಿ(ಬೀರೂರು)

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ(ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಜನ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ಮೇಲೆ ಸ್ವಪ್ರೇರಣೆಯಿಂದ ನೇರ ವಿಚಾರಣೆ ನಡೆಸಲು ಲೋಕಾಯುಕ್ತಕ್ಕೆ ಅಧಿಕಾರ ನೀಡಲಾಗುವುದೇ?

ಆ) ಹಾಗಿದ್ದಲ್ಲಿ ಯಾವಾಗ ಅಧಿಕಾರ ನೀಡಲಾಗುವುದು?

ಉತ್ತರ

ಅ ಮತ್ತು ಆ) ಇದರ ಬಗ್ಗೆ ಸಾರ್ವಜನಿಕ ಚರ್ಚೆ ಪ್ರಾರಂಭವಾಗಿದೆ.

ರಾಜ್ಯದಲ್ಲಿ ವಾರದಲ್ಲಿ 5 ದಿನಗಳ ಕಾಲ ಕೆಲಸ ಮಾಡುವ ಯೋಜನೆ ಪುನಃ ಜಾರಿಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 3(340)

ಸದಸ್ಯರ ಹೆಸರು: ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ

ಉತ್ತರಿಸುವ ಸಚಿವರು: ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ. ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಯೋಜನೇತರ ವೆಚ್ಚದಿಂದ ಆಗುತ್ತಿರುವ ಹೊರೆಯನ್ನು ತಗ್ಗಿಸಲು ಸರ್ಕಾರಿ ನೌಕರರ ಕೆಲಸದ ಅವಧಿ ಹೆಚ್ಚಿಸಿ ವಾರದಲ್ಲಿ 5 ದಿನಗಳ ಕಾಲ ಕೆಲಸ ಮಾಡುವ ವ್ಯವಸ್ಥೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ. 5 ದಿನಗಳ ಕಾಲ ಸರ್ಕಾರಿ ನೌಕರರು ಕೆಲಸ ಮಾಡಿದಲ್ಲಿ ಸರ್ಕಾರದ ಬೊಕ್ಕಸಕ್ಕೆ